(ಕಾಮಗಾರಿ ಇಲಾಖೆಯ ದರದಂತೆ)

		ರೂ.ಪೈ.
೧. ಭಾರವಾದ ಕೆಲಸಗಳಿಗೆ	.....	೯.೭೫ ದಿನಕ್ಕೆ
೨. ಲಘು ಕೆಲಸಗಳಿಗೆ	.....	೭.೯೦ ದಿನಕ್ಕೆ
೩. ಎನ್.ಆರ್.ಇ.ಪಿ.ಆರ್.ಎಲ್.	.....	
ಇಜಿಪಿ ಕೆಲಸಕ್ಕೆ ಕೊಡುವ ಮಜೂರಿ		೭.೮೦ ದಿನಕ್ಕೆ

ಬಳ್ಳಾರಿ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ತಾವರೆಗೊಂದಿ ಏತ ನೀರಾವರಿ ಯೋಜನೆ ಬಗ್ಗೆ

೬೯೨ (೧೩೬೮) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ನೀರಾವರಿ ರಾಜ್ಯಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹರಪನಹಳ್ಳಿ ತಾಲ್ಲೂಕು, ತಾವರೆಗೊಂದಿ ಏತ ನೀರಾವರಿ ಯೋಜನೆ ಮೇರೆಗೆ ೫೦೦ ಎಕರೆ ಪ್ರದೇಶ ಜಮೀನಿಗೆ ನೀರು ಒದಗಿಸಲು ಉದ್ದೇಶಿಸಿರುವುದು ನಿಜವೇ :—

ಆ) ಹಾಗಿದ್ದಲ್ಲಿ, ಈಗ ಪಾಲಿ ಮೇಲ್ಕಂಡ ಏತ ನೀರಾವರಿ ಯೋಜನೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರು ಒದಗಿಸಲಾಗುತ್ತದೆ ?

ಇ) ಈಗ ಆಚ್ಚುಕಟ್ಟು ಪ್ರದೇಶಕ್ಕೆ ಒಳಪಡದೆ ಇರುವ ಜಮೀನುಗಳಿಗೆ ನೀರು ಕೊಡುವ ಪ್ರಯತ್ನ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈಗ ನೀರಾವರಿಗೆ ಒಳಪಟ್ಟಿರುವ ಜಮೀನುಗಳಿಗೆ ನೀರು ಒದಗಿಸಲು ಸಾಮರ್ಥ್ಯ ಇಲ್ಲದಿದ್ದರೂ ನೀರಾವರಿಗೂ ಒಳಪಡದೆ ಇರುವ ಬೇರೆ ಜಮೀನುಗಳಿಗೆ ನೀರು ಒದಗಿಸುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೨೮೦ ಎಕರೆಗಳು.

ಇ) ಅಂತಹ ಪ್ರಯತ್ನ ನಡೆದಿಲ್ಲ.

ಈ) ಉದ್ಭವಿಸುವುದಿಲ್ಲ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಹಿರೇಮೇಗಳಗೆರೆ ಭದ್ರಾ ಬೈಪಾಸ್ ಕಾಲುವೆ ಕಾರ್ಯ

೬೯೩ (೧೬೬೬) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಹಿರೇಮೇಗಳಗೇರಿ ಭದ್ರಾ ಬೈಪಾಸು ಚಾನಲ್ ಕಾರ್ಯದಲ್ಲಿ ವಿಳಂಬವುಂಟಾಗಿರುವುದಕ್ಕೆ ಕಾರಣವೇನು ?

ಆ) ಈ ಬೈಪಾಸು ಚ್ಯಾನಲ್‌ಗೆ ಮಂಜೂರಾತಿಯಾದ ವೆಚ್ಚವನ್ನು ಕಡಿಮೆ ಮಾಡಿ ರಾಜ್ಯದ ಇತರೆ ನೀರಾವರಿ ಯೋಜನೆಗಳಾದ ಹಾರಂಗಿ, ಘಟಪ್ರಭಾ ಯೋಜನೆಗಳಿಗೆ ಹೆಚ್ಚಿನ ಹಣವನ್ನು ನೀಡಿರುವುದಕ್ಕೆ ಕಾರಣವೇನು ?

ಶ್ರೀ ಎಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—